**ಓಎಸ್ ನಂಃ 9/2017**
**ಡಿಡಬ್ಲೂಃ 1**

<u>ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ವಿ.ಜೆ.ಎಮ್. ವಕೀಲರಿಂದ</u>

ಒಂದು ನೋಂದಾಯಿತ ದಾಖಲೆ ಆದ ನಂತರ ಉಪ ನೋಂದಣಾಧಿಕಾರಿ ಕಛೇರಿಯವರು ಸದರಿ ದಾಖಲೆಗಳೊಂದಿಗೆ ಜೆ-ಫಾರ್ಮ್ ಕಟ್ಟಿ ನಮ್ಮ ಕಛೇರಿಗೆ ಬರುತ್ತದೆ. ನಂತರ ನಮ್ಮ ಕಛೇರಿಯವರು ನೋಟೀಸನ್ನು ಉಭಯ ಪಕ್ಷಗಾರರಿಗೆ ಕಳುಹಿಸುತ್ತಾರೆ. ಉಭಯ ಪಕ್ಷಗಾರರಿಂದ ತಕರಾರು ಬಂದರೆ ನಮ್ಮ ಕಛೇರಿಯಲ್ಲಿ ಪ್ರಕರಣ ದಾಖಲಾಗಿ ಉಭಯ ಪಕ್ಷಗಾರರನ್ನು ವಿಚಾರಣೆ ಮಾಡಿ ಆದೇಶವನ್ನು ಮಾಡಲಾಗುತ್ತದೆ. ನೀವು ಈಗ ಹೇಳಿದ ಪ್ರೊಸೀಜರ್ 1963-64 ರಿಂದ ಇದೆ ಎಂದರೆ ಸರಿ.

ಮೃತ ವಾದಿಯ ಹೆಸರಿಗೆ ದಿಃ 07.05.1976ರಲ್ಲಿ ಒಂದು ಖರೀದಿ ಪತ್ರ ಆಗಿದೆ ಎಂದರೆ ಸರಿಯಲ್ಲ. ನೀವು ದಾಖಲೆಗಳನ್ನು ನೋಡಿಯೇ ಇಂದು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿ. ನಾನು ಎಲ್ಲಾ ದಾಖಲೆಗಳನ್ನು ಪರಿಶೀಲಿಸಿ ಇಂದು ಸಾಕ್ಷ್ಯ ನುಡಿಯುತ್ತಿದ್ದೇನೆ. ಉಪನೋಂದಣಾಧಿಕಾರಿ ಕಛೇರಿ ತಹಶೀಲ್ದಾರ್ ಕಛೇರಿಯ ಅಡಿಯಲ್ಲಿ ಬರುತ್ತದೆ ಎಂದರೆ ಸರಿಯಲ್ಲ. ಚಿತ್ತಾಪುರ ತಾಲೂಕಿನ ಸರಕಾರಿ ಕಛೇರಿಗಳಲ್ಲಿ 1976-77ರಲ್ಲಿ ಉರ್ದು ಭಾಷೆ ನಡೆಯುತ್ತಿತ್ತು ಎಂದರೆ ಸರಿಯಲ್ಲ. ವಾದಿಯು ದಿಃ 07.05.1976ರಂದು ದಾಖಲೆ ಸಂಖ್ಯೆ 203/1976-77ರಂತೆ ದಾವಾ ಆಸ್ತಿಯ ಮಾಲಿಕನಾಗಿದ್ದಾನೆ ಎಂದರೆ ಸಾಕ್ಷಿ ಸದರಿ ದಾಖಲೆ ನಮ್ಮ ಇಲಾಖಾ ಕಛೇರಿಯಲ್ಲಿಲ್ಲ, ಆದ ಕಾರಣ ಆತ ಮಾಲಿಕ ಎಂದು ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಒಬ್ಬ ವ್ಯಕ್ತಿ ನೋಂದಾಯಿತ ಖರೀದಿ ಪತ್ರ ಮಾಡಿಕೊಂಡ ತಕ್ಷಣ ಆಸ್ತಿಯ ಮಾಲಿಕನಾಗುತ್ತಾನೆ ಎಂದರೆ ಸಾಕ್ಷಿ ನಮ್ಮ ಇಲಾಖೆಯ ಮ್ಯುಟೇಷನ್ ಆದ ನಂತರ ಮಾತ್ರ ಆತ ಮಾಲಿಕನಾಗುತ್ತಾನೆ ಎಂದು ನುಡಿಯುತ್ತಾರೆ. ವಾದಿ ಈ ದಾವೆಯನ್ನು ಸಲ್ಲಿಸಿದ ನಂತರ ಆತನ ಮಾಲಿಕತ್ವದ ಬಗ್ಗೆ ನೀವು ತನಿಖೆ ಮಾಡಿದ್ದೀರಾ ಎಂದರೆ ಸಾಕ್ಷಿ ನಾನು ದಾಖಲೆಗಳನ್ನು ಪರಿಶೀಲಿಸಿದ್ದೇನೆ, ವಾದಿ ಮಾಲಿಕನಲ್ಲ ಎಂದು ನುಡಿಯುತ್ತಾರೆ.

ನಾವು ದಾವಾ ಆಸ್ತಿಯನ್ನು ಬಸಪ್ಪನಿಂದ ಖರೀದಿ ಮಾಡಿರುತ್ತೇವೆ. ನಾವು ದಾವಾ ಆಸ್ತಿಯನ್ನು ಖರೀದಿ ಮಾಡುವ ಮೊದಲು ಕಂದಾಯ ದಾಖಲೆಗಳನ್ನು ನೋಡಿ ಬಸಪ್ಪನ ಹೆಸರು ಇದ್ದ ಕಾರಣ ಆತನಿಂದ ನಾವು ದಾವಾ ಆಸ್ತಿಯನ್ನು ಖರೀದಿ ಮಾಡಿರುತ್ತೇವೆ. ಬಸಪ್ಪನ ಹೆಸರು ದಾವಾ ಆಸ್ತಿಯ ಕಂದಾಯ ದಾಖಲೆಗಳಲ್ಲಿ ಹೇಗೆ ಬಂತು ಎಂದು ಅಂದಿನ ತಹಶೀಲ್ದಾರ್ ನೋಡಿರಬಹುದು ನನಗೆ ಮಾಹಿತಿ ಇಲ್ಲ. ಖರೀದಿ ಪತ್ರ ಆದ ತಕ್ಷಣ ಋಣಭಾರ ಪತ್ರದಲ್ಲಿ ಅದರ ಬಗ್ಗೆ ನಮೂದಾಗುತ್ತದೆ ಎಂದರೆ ಸರಿ. ದಾವಾ ಆಸ್ತಿಯ ಋಣಭಾರ ಪತ್ರವನ್ನು ನಾನು ನೋಡಿಲ್ಲ. 1976ರಲ್ಲಿ ಸ್ವಾಬಣ್ಣ ತಂದೆ ಮಲ್ಲಪ್ಪ ಇವರು ದಾವಾ ಆಸ್ತಿಯ ಮಾಲಿಕರಿದ್ದರು ಎಂದರೆ ಸರಿಯಲ್ಲ. ಅವರಿಂದ ಮೃತ ವಾದಿ ನೋಂದಾಯಿತ ದಾಖಲೆ ಮೂಲಕ ಖರೀದಿ ಮಾಡಿದ್ದಾನೆ ಎಂದರೆ ಸರಿಯಲ್ಲ.

ನೀವು ಎಷ್ಟು ಹಣ ನೀಡಿ ದಾವಾ ಆಸ್ತಿಯನ್ನು ಖರೀದಿ ಮಾಡಿದ್ದೀರಿ ಎಂದರೆ ಸಾಕ್ಷಿ ನಾನು ದಾಖಲೆ ನೋಡಿ ಹೇಳಬೇಕಾಗುತ್ತದೆ ಎಂದು ನುಡಿಯುತ್ತಾರೆ. ಸಾಕ್ಷಿ ದಾಖಲೆಗಳನ್ನು ನೋಡಿ ಸದರಿ ದಾಖಲೆಗಳಲ್ಲಿ ಪ್ರತಿವಾದಿಯರು ರೂ.20482/- ಹಣ ನೀಡಿ ಖರೀದಿ ಪತ್ರ ಮಾಡಿಕೊಂಡಿದ್ದಾರೆಂದು ನುಡಿಯುತ್ತಾರೆ. ದಾವಾ ಆಸ್ತಿಯಲ್ಲಿ ಪಶು ಸಂಗೋಪನಾ ಚಿಕಿತ್ಸಾಲಯ ಮತ್ತು ಬಾಲಕರ ವಸತಿ ನಿಲಯ ಹಾಗೂ Cluster Research Center ಇವುಗಳನ್ನು ಎಂದು ಕಟ್ಟಲಾಗಿದೆ ಎಂದು ಕೇಳಿದಾಗ ಸಾಕ್ಷಿ ದಿಃ 18.02.2001ರಂದು ಬಾಲಕರ ವಸತಿ ನಿಲಯ ಉದ್ಘಾಟನೆ ಆಗಿದೆ ಉಳಿದ ಕಟ್ಟಡಗಳನ್ನು ಎಂದು ಕಟ್ಟಲಾಗಿದೆ ಎಂದು ನನಗೆ ನಿಖರವಾಗಿ ದಿನಾಂಕ ಹೇಳಲು ಬರುವುದಿಲ್ಲ. ನಿಮ್ಮ ಪ್ರಮಾಣ ಪತ್ರದಲ್ಲಿ ಬಾಲಕರ ವಸತಿ ನಿಲಯ ದಾವಾ ಆಸ್ತಿಯಲ್ಲಿದ್ದ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸರಿ. ಸರ್ವೆ ಇಲಾಖೆಯು ಮೊದಲು ತಹಶೀಲ್ದಾರ್ ಕಛೇರಿಯ ಅಡಿಯಲ್ಲಿ ಬರುತ್ತಿತ್ತು ಎಂದರೆ ಸರಿ. ದಾವಾ ಆಸ್ತಿಯ ಪಹಣಿ ಪತ್ರಿಕೆಯಲ್ಲಿ ಕಟ್ಟಡದ ಬಗ್ಗೆ ನಮೂದು ಮಾಡಿಲ್ಲ ಎಂದರೆ ಸರಿ. ಅದರಂತೆ ಕಂದಾಯ ದಾಖಲೆಗಳಲ್ಲಿ ಕಟ್ಟಡದ ಕ್ಷೇತ್ರವನ್ನು ಕಡಿಮೆ ಮಾಡಿಲ್ಲ ಎಂದರೆ ಸರಿ. ದಾವಾ ಆಸ್ತಿಯಲ್ಲಿ ನೀವು ಹೇಳುವ ಕಟ್ಟಡಗಳು ಇಲ್ಲ ಆದ ಕಾರಣ ಅದರಲ್ಲಿ ಕ್ಷೇತ್ರ ಕಡಿಮೆ ಮಾಡಿಲ್ಲ ಎಂದರೆ ಸರಿಯಲ್ಲ. ನಿಮ್ಮ ಇಲಾಖೆಯವರು ಮೃತ ವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ರಾಜಕೀಯ ಒತ್ತಡಕ್ಕೆ ಒಳಗಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಿ ಎಂದರೆ ಸರಿಯಲ್ಲ. ಬಸಪ್ಪ ತಂದೆ ತಿಪ್ಪಣ್ಣ ಈತನಿಗೆ ದಾವಾ ಆಸ್ತಿಯನ್ನು ನಿಮಗೆ ಮಾರಾಟ

ಮಾಡುವ ಅಧಿಕಾರ ಇರಲಿಲ್ಲ ಎಂದರೆ ಸರಿಯಲ್ಲ. ಇಂದಿಗೂ ಸಹ ವಾದಿಯೇ ದಾವಾ ಆಸ್ತಿಯ ಮಾಲಿಕನಾಗಿದ್ದು ಆತನೇ ಅದರ ಕಬ್ಜಾ ಹೊಂದಿದ್ದಾನೆ ಎಂದರೆ ಸರಿಯಲ್ಲ. ನೀವು ಈ ದಾವೆಯನ್ನು ಸಲ್ಲಿಸಿದ ನಂತರ ವಾದಿ ಹಾಜರುಪಡಿಸಿದ ಖರೀದಿ ಪತ್ರವನ್ನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನಿಸಿಲ್ಲ ಎಂದರೆ ಸಾಕ್ಷಿ ಆ ರೀತಿ ಯಾವುದೇ ದಾಖಲೆ ಇಲ್ಲದಿದ್ದ ಕಾರಣ ಪ್ರಶ್ನಿಸಿಲ್ಲ ಎಂದು ನುಡಿಯುತ್ತಾರೆ. ಸರ್ವೆ ನಂಬರ್ 251ಕ್ಕೆ ಹಾಗೂ ಪ್ರತಿವಾದಿಗೆ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನೀವು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು,
ಚಿತ್ತಾಪೂರ.